**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ: 447/2022**

| | | |
|---|---|---|
| **ಸಾಕ್ಷಿದಾರರ ಹೆಸರು** | : ಸಂತೋಷ್ ಕೆ ಕೆ | **P.W -05** |
| **ತಂದೆಯ ಹೆಸರು** | : ಕೃಷ್ಣಪ್ಪ | **C.W -12** |
| **ವಯಸ್ಸು** | : 30 ವರ್ಷ | |
| **ಉದ್ಯೋಗ** | : ಆಟೋ ಚಾಲಕ | |
| **ವಾಸಸ್ಥಳ** | : ಕೆರೆ ಮನೆ. | |

**ದಿನಾಂಕಃ26-09-2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**::ಮುಖ್ಯ ವಿಚಾರಣೆ :: ಮಾನ್ಯ A.P.P ರವರಿಂದ ::**

1. ಸಾಕ್ಷಿಗೆ ದಿಃ 08-03-2020 ರ ಒಂದು ವಹಜರ್ ಅನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಅನ್ನು ನಿಪಿ -11 ಮತ್ತು ಸಾಕ್ಷಿಯ ಸಹಿಯನ್ನು ನಿಪಿ -11(ಎ) ಎಂದು ಗುರುತಿಸಲಾಯಿತು. ಸದರಿ ಮಹಜರ್ ಗೆ ನಾನು ಸಹಿಯನ್ನು ಶೃಂಗೇರಿಯ ಕಾಂಚೀನಗರದಲ್ಲಿ ಶಬರೀಶ್/1 ನೇ ಆರೋಪಿ ಮತ್ತು ವಿಶ್ವನಾಥ್ / 3 ನೇ ಆರೋಪಿಯ ಮನೆಯ ಬಳಿ ಮಾಡಿರುತ್ತೇನೆ. ವಿಶ್ವನಾಥ್ / 3 ನೇ ಆರೋಪಿಯ ಮನೆಯಲ್ಲಿ ಪೋಲೀಸರು ನನಗೆ ಸ್ಪೋಟಕ ವಸ್ತುಗಳು ಸಿಕ್ಕಿರುವುದಾಗಿ ತಿಳಿಸಿದ್ದು, ಅದರ ಬಗ್ಗೆ ಮಹಜರ್ ಮಾಡಬೇಕಾಗಿದ್ದು, ನನ್ನನ್ನು ಪಂಚನಾಗಿ ಬರಲು ಹೇಳಿದ್ದ ಕಾರಣ ನಾನು ಅವರ ಮನೆಯ ಬಳಿ ಹೋಗಿ ಮಹಜರ್ ಗೆ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪೋಲೀಸರು ವಿಶ್ವನಾಥ್ / 3 ನೇ ಆರೋಪಿ ಇಂದ ಒಂದು ಬಂದೂಕಿಗೆ ಸಂಬಂಧ ಪಟ್ಟ ಲೈಸನ್ಸ್ ಅನ್ನು ಅಮಾನತು ಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ಸಮಯದಲ್ಲಿ ಪೋಲೀಸರು, 3 ನೇ ಆರೋಪಿ ಮತ್ತು ಆಕಾಶ್ /ಚಾಸಾ-11 ರವರು ಇದ್ದರು. ನಿಪಿ -11 ಮಹಜರ್ ನಲ್ಲಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಮಹಜರ್ ಅನ್ನು ಪೋಲೀಸರು ಆ ದಿನ ಬೆಳಗ್ಗೆ 11.45 ರಿಂದ ಮಧ್ಯಾಹ್ನ 12.45 ರ ಮಧ್ಯೆದಲ್ಲಿ ತಯಾರಿಸಿರುತ್ತಾರೆ. ಸದರಿ ಮಹಜರ್ ಸಮಯದಲ್ಲಿ ಪೋಲೀಸರು 2 ಪೋಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ಸದರಿ 2

ಫೋಟೋಗಳನ್ನು ನೋಡಿ ಅದರಲ್ಲಿರುವ ಮನೆಗಳನ್ನು 1 ನೇ ಮತ್ತು 3 ನೇ ಆರೋಪಿಗಳ ಮನೆ ಎಂದು ಗುರುತಿಸಿದ ಕಾರಣ ಅವುಗಳನ್ನು ಕ್ರಮವಾಗಿ ನಿಪಿ-12 ಮತ್ತು ನಿಪಿ -13 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಲೈಸನ್ಸ್ ನ ನಕಲು ಪ್ರತಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು (ಆರೋಪಿತರ ವಕೀಲರ ತಕರಾರಿಗೆ ಒಳಪಟ್ಟು) ಸದರಿ ಲೈಸನ್ಸ್ ನ ನಕಲು ಪ್ರತಿಯನ್ನು ನಿಪಿ-14 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -14(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**<u>::ಪಾಟೀಸವಾಲು::ಮಾನ್ಯ A.P.P ಯವರಿಂದ::</u>**

1. ನಿಪಿ-11 ಮಹಜರ್ ಬರೆಯುವ ಪೂರ್ವದಲ್ಲಿ ನಾನು ಪೋಲೀಸ್ ಠಾಣೆಯಿಂದ ಪೋಲೀಸರ ಜೊತೆ 2 ಮತ್ತು 3 ನೇ ಆರೋಪಿಗಳು ತೋರಿಸಿಕೊಟ್ಟಂತೆ 1 ನೇ ಹಾಗೂ 3 ನೇ ಆರೋಪಿತರ ಮನೆಗೆ ಹೋಗಿರುತ್ತೇನೆ ಮತ್ತು ಸದರಿ ಸ್ಥಳಗಳಲ್ಲಿಯೇ ನಿಪಿ-11 ಪಂಚನಾಮೆಯನ್ನು ಪೋಲೀಸರು ತಯಾರಿಸಿರುತ್ತಾರೆ ಮತ್ತು 4 ನೇ ಆರೋಪಿಗೆ ಸಂಬಂಧ ಪಟ್ಟ ಗನ್ ಲೈಸನ್ಸ್ ಅನ್ನು ಪೋಲೀಸರು ಸದರಿ ಮಹಜರ್ ನ ಅಡಿ ಅಮಾನತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ನಿಪಿ-11 ಮಹಜರ್ ತಯಾರಿಸುವ ಸಮಯದಲ್ಲಿ 2 ನೇ ಆರೋಪಿ ಸಹ ಸ್ಥಳದಲ್ಲಿಯೇ ಇದ್ದರು ಎಂದರೆ ಸರಿ. ಈ ದಿನ ನ್ಯಾಯಾಲಯದಲ್ಲಿರುವ ಇಬ್ಬರು ವ್ಯಕ್ತಿಗಳು ಈ ಪ್ರಕರಣದ 2 ನೇ ಮತ್ತು 3 ನೇ ಆರೋಪಿತರು ಆಗಿರುತ್ತಾರೆ ಎಂದರೆ ಸರಿ.

**<u>::ಪಾಟೀ ಸವಾಲು:: 1 ರಿಂದ 4 ನೇ ಆರೋಪಿ ಪರ ಶ್ರೀ. H.R.U ವಕೀಲರಿಂದ::</u>**

1. ನನ್ನ ವಾಸದ ಮನೆ ಶೃಂಗೇರಿಯ ಕಾಂಚೀನಗರದಿಂದ ಸುಮಾರು 10 ಕಿ.ಮೀ. ನಷ್ಟು ದೂರದಲ್ಲಿ ಇರುತ್ತದೆ ಎಂದರೆ ಸರಿ. ಚಾಸಾ-11 ರವರ ಮನೆ ಸಹ ಕಾಂಚೀನಗರದಿಂದ ಸುಮಾರು 10 ಕಿ.ಮೀ ದೂರದಲ್ಲಿರುತ್ತದೆ ಎಂದರೆ ಸರಿ. ಶೃಂಗೇರಿಯ ಕಾಂಚೀನಗರದಲ್ಲಿ ನೂರಾರು ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ನಾನು ಮತ್ತು ಚಾಸಾ-11 ರವರು ಸುಮಾರು ವರ್ಷಗಳಿಂದ ಶೃಂಗೇರಿಯ ಬಜರಂಗದಳ, ವಿ.ಹೆಚ್.ಪಿ ಮತ್ತು ಬಿ.ಜೆ.ಪಿ ರಾಜಕೀಯ ಪಕ್ಷಗಳ ಜೊತೆ ಗುರುತಿಸಿಕೊಂಡಿರುತ್ತೇವೆ ಎಂದರೆ ಸರಿ. ಚಾಸಾ-7/ಹರೀಶ್ ಶೆಟ್ಟಿ ರವರು ಸದರಿ

ಸಂಘಟನೆಗಳ ಮುಖಂಡರು ಆಗಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-11 ಮಹಜರ್ ತಯಾರಿಸುವ ಪೂರ್ವದಲ್ಲಿ ಪೋಲೀಸರು ನನಗೆ ಶೃಂಗೇರಿ ಪೇಟೆಯ ಮುಖ್ಯ ರಸ್ತೆಯಲ್ಲಿ ನೋಟೀಸನ್ನು ಜಾರಿ ಮಾಡಿದ್ದರು. ನಾನು ಹೇಳುತ್ತಿರುವಂತೆ ನನಗೆ ಪೋಲೀಸರು ಯಾವುದೇ ನೋಟೀಸನ್ನು ನೀಡಿರುವುದಿಲ್ಲ ಮತ್ತು ನಾನು ಹಾಗೂ ಚಾಸಾ-11 ರವರು ಚಾಸಾ-7/ಹರೀಶ್ ಶೆಟ್ಟಿ ರವರ ಚಿತಾವಣೆ ಮೇರೆಗೆ ನಿಪಿ-11 ಮಹಜರ್ ಗೆ ನಾವುಗಳು ಶೃಂಗೇರಿ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

2. ನಿಪಿ-11 ಮಹಜರ್ ತಯಾರಿಸಿದ ದಿನವೇ ನನ್ನ ಸಮಕ್ಷಮ ಪೋಲೀಸರು 4 ನೇ ಆರೋಪಿಯ ಮನೆಯಿಂದ 3 ನೇ ಆರೋಪಿ ತೋರಿಸಿದಂತೆ ಸ್ಫೋಟಕ ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುತ್ತಾರೆ. ನಿಪಿ-11 ಮಹಜರ್ ನಲ್ಲಿ ನನ್ನ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದು ಹೇಳಿರುವ ಸ್ಫೋಟಕ ವಸ್ತುಗಳ ಬಗ್ಗೆ ನಮೂದು ಇರುತ್ತದೆ. ನಿಪಿ-11 ಮಹಜರ್ ಅನ್ನು ಪೋಲೀಸರು 4 ನೇ ಆರೋಪಿಯ ಮನೆಯ ಬಳಿ ತಯಾರಿಸಿರುತ್ತಾರೆ. ನಿಪಿ-11 ಮಹಜರ್ ಸುಮಾರು 5-6 ಪುಟಗಳಿಂದ ಕೂಡಿರುತ್ತದೆ. ನಿಪಿ-11 ಮಹಜರ್ ನ ಎಲ್ಲಾ ಪುಟಗಳಿಗೂ ನಾನು ಸಹಿ ಮಾಡಿರುತ್ತೇನೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಪೋಲೀಸರು ತೋರಿಸಿಕೊಟ್ಟ ಸ್ಥಳಗಳಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಆ ದಿನ 1 ನೇ ಆರೋಪಿಯ ಮನೆಗೆ ನಾವು ಹೋದ ಸಂದರ್ಭದಲ್ಲಿ ಬೀಗ ಹಾಕಲಾಗಿತ್ತು. 4 ನೇ ಆರೋಪಿಯ ಮನೆಗೆ ನಾವು ಹೋದ ಸಂದರ್ಭದಲ್ಲಿ ಬೀಗ ಹಾಕಲಾಗಿತ್ತು. 4 ನೇ ಆರೋಪಿಯ ಮನೆಯಲ್ಲಿ ಆ ದಿನ 4 ನೇ ಆರೋಪಿ ಇದ್ದರೋ ಇಲ್ಲವೋ ಈಗ ನನಗೆ ನೆನಪಿಲ್ಲ. ನಿಪಿ-12 ಮತ್ತು ನಿಪಿ-13 ರಲ್ಲಿ ಕಂಡು ಬರುವ ಪೋಟೋಗಳಲ್ಲಿರುವ ಮನೆಗಳು 1 ನೇ ಹಾಗೂ 4 ನೇ ಆರೋಪಿಯ ಮನೆಗಳು ಎಂದು ನನಗೆ ಪೋಲೀಸರು ತಿಳಿಸಿರುತ್ತಾರೆ. ನಿಪಿ-12 ಮತ್ತು ನಿಪಿ-13 ರಲ್ಲಿ ಕಂಡು ಬರುವ ಪೋಟೋಗಳಲ್ಲಿರುವ ಮನೆಗಳು 1 ನೇ ಹಾಗೂ 4 ನೇ ಆರೋಪಿಯ ಮನೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಗನ್ ಲೈಸನ್ಸ್ ಅನ್ನು ನಾನು ಹೇಳುವಂತೆ ಅಮಾನತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-14 ರಲ್ಲಿ ಏನೆಲ್ಲಾ ವಿಚಾರ ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ನಿಪಿ -11 ಮಹಜರ್ ಗೆ ಶೃಂಗೇರಿ ಪೋಲೀಸ್ ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿರುವ ವಿಚಾರಗಳಾದ 2 ನೇ ಮತ್ತು 3 ನೇ ಆರೋಪಿತರು ಪೋಲೀಸರ ಜೊತೆ 1 ನೇ ಮತ್ತು 4 ನೇ ಆರೋಪಿಗಳ ಮನೆಗಳನ್ನು ನನ್ನ ಸಮಕ್ಷಮ ತೋರಿಸಿಕೊಟ್ಟಿರುತ್ತಾರೆ ಮತ್ತು ಸದರಿ ಸಮಯದಲ್ಲಿ

ನಮ್ಮ ಸಮಕ್ಷಮದಲ್ಲಿ ನಿಪಿ-11 ರಂತೆ ಮಹಜರ್ ಅನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**::ಮರುವಿಚಾರಣೆ ಇಲ್ಲ::**

(ದಿನಾಂಕಃ26-09-2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-
ಪ್ರ.ದ.ನ್ಯಾ.ದಂಃ ಶೃಂಗೇರಿ